ಡಿ ಡಬ್ಲ್ಯೂ್ಃ ಶ್ರೀಮತಿ ಕವಲೂರು ಸರೋಜಮ್ಮ ಕೋಂ
ದಿಃ ಕವಲೂರು ಬಸವಣ್ಣಪ್ಪ

(ದಿನಾಂಕ 05-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

<u>ಮುಂದುವರೆದ ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ ಹೆಚ್ ಎಸ್ ಎನ್ ರವರಿಂದಃ-</u>

18. ನನ್ನ ಮನೆಗೆ ನಾನೇ ಯಜಮಾನರು ಎಂದರೆ ಸರಿ. ಏನಾದರೂ ವ್ಯವಹಾರ ಮಾಡುವುದಾದರೇ ನಾನೇ ಮಾಡುತ್ತೇನೆ, ಮುಂದುವರೆದು ನನ್ನ ಮಕ್ಕಳು ಸಹಾ ವ್ಯವಹಾರ ಮಾಡುತ್ತಾರೆಂದು ಹೇಳುತ್ತಾರೆ. ವಾದಿಯು ಹೆಚ್ ಬಿ ಹಳ್ಳಿ ಎ ಪಿ ಎಂ ಸಿ ಯಾರ್ಡನಲ್ಲಿ ಬೀಜ ಗೊಬ್ಬರ ಮಾಡುತ್ತಿದ್ದಾರೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬೀಜ ಗೊಬ್ಬರಗಳನ್ನು ಕೊಡುವ ಸಂಬಂಧ ವಾದಿಯು ದಾಖಲಾತಿಗಳನ್ನು ಮಾಡಿಸಿಕೊಳ್ಳುತ್ತಿದ್ದರೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬೀಜ ಗೊಬ್ಬರದ ಸಂಬಂಧ ನಾನು ಭದ್ರತೆಗಾಗಿ ನಾನು ವಾದಿಗೆ ದಾಖಲೆ ಮಾಡಿಕೊಟ್ಟಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತಿರುವುದಿಲ್ಲ ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು ನನ್ನ ಮಕ್ಕಳು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ